# ಟೀಚರ್ ಕಷ್ಟ-ಸುಖ

ಅದು ಫೆಬ್ರುವರಿ–ಮಾರ್ಚ್ ತಿಂಗಳ ವಾರ್ಷಿಕ ಪರೀಕ್ಷಾ ಸಮಯ. ಆ ಶಿಕ್ಷಕಿಗೆ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಪಠ್ಯವಿಷಯಗಳನ್ನು ಪೂರ್ಣಗೊಳಿಸಿ ಪುನರಾವರ್ತನೆ ಕೈಗೆತ್ತಿಕೊಳ್ಳುವ ಅವಸರ. ಅದೇ ಸಮಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದ ಜವಾಬ್ದಾರಿಯನ್ನೂ ವಹಿಸಲಾಗಿತ್ತು. ಅದೊಂದು ದಿನ ಮಕ್ಕಳಿಗೆ ಪಾಠ ಮಾಡುತ್ತಿರುವಾಗ ವ್ಯಕ್ತಿಯೊಬ್ಬ ತರಗತಿಯ ಬಾಗಿಲಿನಲ್ಲಿ ಬಂದು ನಿಂತ. ಮತದಾರರ ಪಟ್ಟಿಗೆ ತನ್ನ ಹೆಸರು ಸೇರಿಸಲು ಬಂದ ಆ ವ್ಯಕ್ತಿಗೆ ಅರ್ಜಿ ಕೊಟ್ಟು 'ಭರ್ತಿ ಮಾಡಿಕೊಂಡು ಬನ್ನಿ' ಎಂದು ಶಿಕ್ಷಕಿ ಹೇಳಿದರು. ಮತ್ತೆ ಪಾಠಕ್ಕೆ ಶುರುವಿಟ್ಟುಕೊಂಡರು. ಮರುಕ್ಷಣದಲ್ಲೇ ಆ ವ್ಯಕ್ತಿ ಮತ್ತೆ ಬಾಗಿಲಿನಲ್ಲಿ ಪ್ರತ್ಯಕ್ಷ! ತಲೆ ಕೆರೆದುಕೊಳ್ಳುತ್ತಾ 'ಭರ್ತಿ ಮಾಡಕೆ ಗೊತ್ತಾಗಲ್ಲ' ಎಂದ.

'ಸರಿ, ಮಧ್ಯಾಹ್ನ ಬಾ. ಅರ್ಜಿ ಭರ್ತಿ ಮಾಡುವೆ' ಶಿಕ್ಷಕಿ ಸಾವಧಾನದಿಂದಲೇ ಹೇಳಿದರು. ಆದರೆ ಅದನ್ನು ಕೇಳುವ ಸ್ಥಿತಿಯಲ್ಲಿ ಆ ವ್ಯಕ್ತಿ ಇರಲಿಲ್ಲ. 'ಈಗಲೇ ತುಂಬಿಕೊಡಿ ಟೀಚರ್, ಆಮೇಲೆ ಕೂಲಿ ಕೆಲಸಕ್ಕೆ ಹೋಗಬೇಕು' ಎಂದು ಪಟ್ಟುಹಿಡಿದು ಕುಳಿತೇಬಿಟ್ಟರು. ಬೇರೆ ದಾರಿ ಕಾಣದೆ ಶಿಕ್ಷಕಿ ತರಗತಿ ಬಿಟ್ಟು ಅರ್ಜಿ ಭರ್ತಿ ಮಾಡಲು ಕುಳಿತರು. ಇದಕ್ಕೇ ಕಾಯುತ್ತಿದ್ದವರಂತೆ ನಾಲ್ಕೈದು ಮಂದಿ 'ನಮ್ಮದೂ ತುಂಬಿಕೊಡಿ' ಎಂದು ದುಂಬಾಲು ಬಿದ್ದರು. ಅಲ್ಲಿಗೆ ಅಂದಿನ ತರಗತಿ ಕಾರ್ಯ ನಿಂತುಹೋಯಿತು. ವಾರಕ್ಕೆ ಮೂರ್ನಾಲ್ಕು ದಿನ ಇಂಥದ್ದೇ ಸನ್ನಿವೇಶಕ್ಕೆ ತರಗತಿ ಬಲಿಯಾಗುತ್ತಿತ್ತು. ಕಡೆಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಬಂದಾಗ ಆ ಶಿಕ್ಷಕಿಯ ವಿಷಯದಲ್ಲಿ ಮಕ್ಕಳು ಹೆಚ್ಚು ಅನುತ್ತೀರ್ಣರಾಗಿದ್ದಾರೆ ಎಂದು ಹೇಳಿ ಮೇಲಧಿಕಾರಿಗಳಿಂದ ನೋಟಿಸ್ ಜಾರಿಯಾಯಿತು.

***

ವಿಧಾನಸಭೆ ಚುನಾವಣಾ ಸಮಯ. ದೂರದೊಂದು ಊರಿಗೆ ಮತಗಟ್ಟೆ ಅಧಿಕಾರಿಯಾಗಿ ನೇಮಕಗೊಂಡ ಆ ಶಿಕ್ಷಕಿಗೆ ಸಂದಿಗ್ಧ ಪರಿಸ್ಥಿತಿ. ಒಂದು ಕಡೆ ಚುನಾವಣಾ ಕಾರ್ಯ. ಮತ್ತೊಂದೆಡೆ ಗಂಭೀರ ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಗೆ ಕಿಮೊ ಚಿಕಿತ್ಸೆ ಕೊಡಿಸಲೇಬೇಕಾದ ಅನಿವಾರ್ಯ. ಆ ಶಿಕ್ಷಕಿ ತನ್ನ ತಾಯಿಯ ಪರಿಸ್ಥಿತಿಯನ್ನು ಅಧಿಕಾರಿಗಳ ಬಳಿ ವಿವರಿಸಿದರು; ಅದಕ್ಕೆ ಪೂರಕ ದಾಖಲೆಗಳನ್ನೂ ಸಲ್ಲಿಸಿದರು. ಆದರೆ, ಅಧಿಕಾರಿಗಳ ಮನಸು ಕರಗಬೇಕಲ್ಲ... ಬೇರೆ ವಿಧಿ ಇಲ್ಲದೆ ಪರಿಚಿತರೊಬ್ಬರ ಸಹಾಯ ಪಡೆದು ತಾಯಿಯನ್ನು ನೋಡಿಕೊಳ್ಳಲು ಹೇಳಿ ಚುನಾವಣಾ ಕರ್ತವ್ಯಕ್ಕೆ ಹಾಜರಾದರು. ತಾಯಿಯ ಸಂಕಷ್ಟದ ಪರಿಸ್ಥಿತಿಯಲ್ಲಿ ಜೊತೆಗಿರಲು ಆಗಲಿಲ್ಲ ಎಂಬ ಕೊರಗು ಆ ಶಿಕ್ಷಕಿಯನ್ನು ಇಂದಿಗೂ ಕಾಡುತ್ತಿದೆ.

***

ಯುವ ಶಿಕ್ಷಕಿಯೊಬ್ಬರು ಜನಗಣತಿ ಕಾರ್ಯಕ್ಕೆ ನಿಯೋಜನೆಗೊಂಡಿದ್ದರು. ಅದು ಯಾವುದೇ ವಾಹನ ಸೌಲಭ್ಯವಿರದ ಹಳ್ಳಿ. ಮೂರ್ನಾಲ್ಕು



